**ಮುಂದುವರಿದ ದಿನಾಂಕಃ 15.01.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

**ಪ್ರಶ್ನೆಃ** ನೀವು ದಾವಾ ಸ್ವತ್ತು ಖರೀದಿಸುವಾಗ ಪ್ರತಿವಾದಿ ಹೆಂಡತಿ ಮತ್ತು ಮಕ್ಕಳನ್ನು ದಾವಾ ಸ್ವತ್ತು ಖರೀದಿಸುವ ಬಗ್ಗೆ ಕೇಳಿದ್ದೀರಾ?

**ಉತ್ತರಃ** ಅದಕ್ಕೂ ಮತ್ತು ನನಗೆ ಯಾವುದೇ ಸಂಬಂಧ ಇಲ್ಲ.

ದಾವಾ ಸ್ವತ್ತು ಪ್ರತಿವಾದಿಯ ತಂದೆಯ ಆಸ್ತಿಯಾಗಿರುವುದರಿಂದ, ಅದು ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ಸಂಬಂಧಿಸಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ಕ್ರಯ ಕರಾರಿನ ಬಗ್ಗೆ ತಿಳಿಸಿದರೆ, ಅವರು ಅದಕ್ಕೆ ತಕರಾರು ಮಾಡುತ್ತಾರೆ ಎಂದು ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಪ್ರತಿವಾದಿ ಕಡೆಯಿಂದ ಬಲವಂತವಾಗಿ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಮಕ್ಕಳು ಇರುವುದಿಲ್ಲ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ಗಂಡನಿಗೆ ವಾರ್ಷಿಕ 1 ಲಕ್ಷ 20 ಸಾವಿರ ರೂ.ಆದಾಯ ಇರುತ್ತದೆ. 2002 ರಲ್ಲಿ ನಮಗೆ ಸಂಬಂಧಿಸಿರುವ 1 ಎಕರೆ ಜಮೀನನ್ನು ನಿವೇಶನ ಖರೀದಿಸಲು ಮಾರಾಟ ಮಾಡಿರುತ್ತೇವೆ. ನಮ್ಮ ಹತ್ತಿರ ಸದರಿ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಆಗುವುದಿಲ್ಲ. ನಮಗೆ 2002 ರಲ್ಲಿ ಜಮೀನು ಮಾರಾಟ ಮಾಡಿದಾಗ ನಗದು ರೂಪದಲ್ಲಿ ಮಾರಾಟದ ಹಣ ಸಂದಾಯ ಮಾಡಿರುತ್ತಾರೆ. ನಾವು ಸದರಿ ಸ್ವತ್ತು ರೂ. 20 ಲಕ್ಷಕ್ಕೆ ಮಾರಾಟ ಮಾಡಿರುತ್ತೇವೆ. ಸದರಿ ಹಣ ಸ್ವಲ್ಪ ಖರ್ಚಾಗಿ ಬಾಕಿ ಹಣ ನಮ್ಮ ಹತ್ತಿರ ಇಟ್ಟುಕೊಂಡಿದ್ದೆವು. ಸದರಿ ಹಣ 7-8 ವರುಷ

ನಾವು ನಮ್ಮ ಹತ್ತಿರ ಇಟ್ಟುಕೊಂಡಿದ್ದೆವು. ನಾವು ಯಾವುದೇ ಆದಾಯ ತೆರಿಗೆಯನ್ನು ಕಟ್ಟಿರುವುದಿಲ್ಲ. ದಿಃ 07.03.2020 ರಲ್ಲಿ ನನ್ನ ಗಂಡನಿಗೆ ಅಪಘಾತವಾಗಿರುತ್ತದೆ. ನನ್ನ ಗಂಡನಿಗೆ ಅಪಘಾತವಾದ ನಂತರ ಅವರು ಓಡಾಡಿಕೊಂಡು ಇರಲಿಲ್ಲ. ನನ್ನ ಗಂಡ ಬಡ್ಡಿ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸುಳ್ಳು. ನನ್ನ ಗಂಡ ಯಾವುದೇ ವ್ಯವಹಾರ ಮಾಡುವಾಗ ನನಗೆ ಹೇಳಿ ಮಾಡುತ್ತಿದ್ದರು. ನಾವು ಪ್ರತಿವಾದಿಗೆ ನೀಡಿದ ಹಣದ ಮುಖಬೆಲೆಗಳು ರೂ.500 ಆಗಿರುತ್ತದೆ. ಪ್ರತಿವಾದಿಗೆ ನನ್ನ ಗಂಡ ಹಣ ನೀಡಿರುತ್ತಾರೆ. ಪ್ರತಿವಾದಿ ಹಣವನ್ನು ತನ್ನ ಎರಡೂ ಜೇಬುಗಳಲ್ಲಿ ಇಟ್ಟುಕೊಂಡು ಹೋಗಿರುತ್ತಾರೆ. ಪ್ರತಿವಾದಿ ಹಣವನ್ನು ನಾವು ಎಣಿಕೆ ಮಾಡಿರುವುದರಿಂದ ಸರಿ ಇರುತ್ತದೆ ಎಂದು ಹೇಳಿ ಹಣ ತೆಗೆದುಕೊಂಡು ಹೋಗಿರುತ್ತಾರೆ.

ಪ್ರತಿವಾದಿಗೆ ನಾವು ನೋಟೀಸ್ ನೀಡಿದ ನಂತರ ಅವರು ನಮ್ಮನ್ನು ಕೇಳಲು ಬಂದಿರುವುದಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.

ಸಹಿ/-

**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**